**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ. ನಂ.1312/2020**

ಸಿ.ಡಬ್ಲ್ಯು 12
ಪಿ.ಡಬ್ಲ್ಯು 11

ಸಾಕ್ಷಿದಾರರ ಹೆಸರು – ಗಣೇಶ ನಾಯ್ಕ
ತಂದೆಯ ಹೆಸರು – ಗೋವಿಂದ ನಾಯ್ಕ
ವಯಸ್ಸು – 46 ವರ್ಷ
ಉದ್ಯೋಗ – ಪೊಲೀಸ್ ಮುಖ್ಯ ಪೇದೆ, ಕುಮಟಾ ಪೊಲೀಸ್ ಠಾಣೆ
ವಾಸ್ತವ್ಯ – ಕುಮಟಾ

(ಇಂದು ದಿನಾಂಕಃ 17-12-2024 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು ಕಳೆದ 3 ವರ್ಷಗಳಿಂದ ಕುಮಟಾ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಕುಮಟಾ ಪೊಲೀಸ್ ಠಾಣೆ ಗುನ್ನಾ ನಂ. 116/2019 ರಲ್ಲಿ ದಸ್ತಗಿರಿ ಆದ 1 ಮತ್ತು 2 ನೇ ಆರೋಪಿತರು ವಿಚಾರಣೆ ಕಾಲಕ್ಕೆ ತಾವು 3 ನೇ ಆರೋಪಿತನೊಂದಿಗೆ ಸೇರಿಕೊಂಡು ದಿಃ 21-11-2018 ರಂದು ರಾತ್ರಿ 11.00 ಗಂಟೆ ಸುಮಾರಿಗೆ ಮಣಕಿ ಮೈದಾನದ ಹತ್ತಿರ ನಿಲ್ಲಿಸಿಟ್ಟ ಕೆಎ-47-ಇ-2604 ನೊಂದಣಿಯ ಮೋಟಾರ್ ಸೈಕಲನ್ನು ಕಳ್ಳತನ ಮಾಡಿರುವುದಾಗಿ ನೀಡಿದ ಹೇಳಿಕೆಯಂತೆ 3 ನೇ ಆರೋಪಿತನ ಪತ್ತೆ ಕುರಿತು ದಿಃ 28-06-2019 ರಂದು ನಾನು, ಚಾ.ಸಾ. 13 ರಿಂದ 15 ಹಾಗೂ ಚಾ.ಸಾ. 18 ರವರೊಂದಿಗೆ ಆರೋಪಿತನ ಪತ್ತೆ ಕುರಿತು ಹೊರಟು ಬೆಳಿಗ್ಗೆ

9.45 ಗಂಟೆಗೆ 3 ನೇ ಆರೋಪಿತನನ್ನು ಹಿಡಿದು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಬಂದು ವಿಚಾರಿಸಿದಾಗ ಆತನು ತಾನು ದಿಃ 21-11-2018 ರಂದು ಮಣಕಿ ಮೈದಾನ ಹತ್ತಿರ ನಿಲ್ಲಿಸಿಟ್ಟ ಮೋಟಾರ್ ಸೈಕಲನ್ನು ಕಳ್ಳತನ ಮಾಡಿದ ಬಗ್ಗೆ ಹೇಳಿಕೆ ನೀಡಿದಂತೆ ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಬರಮಾಡಿಕೊಂಡು ಆರೋಪಿತನು ಹೇಳಿದಂತೆ ಘಟನಾ ಸ್ಥಳವನ್ನು ತೋರಿಸಿಕೊಟ್ಟ ಬಗ್ಗೆ ಪಂಚನಾಮೆಯನ್ನು ತಯಾರಿಸಿಕೊಂಡಿರುತ್ತಾರೆ. ನಾನು ತನಿಖೆಯ ಕಾಲದಲ್ಲಿ ಹಾಜರಿದ್ದು, ತನಿಖಾಧಿಕಾರಿಗಳಿಗೆ ಯೋಗ್ಯ ಸಹಾಯವನ್ನು ನೀಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು –ಆರೋಪಿತರ ಪರ ಶ್ರೀಮತಿ ಪಿ.ಹೆಚ್.ಕೆ. ವಕೀಲರಿಂದ**

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಹಾಗೂ ಇತರ ದಾಖಲಾತಿಗಳನ್ನು ಠಾಣೆಯಲ್ಲಿ ಕುಳಿತು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಸ್ಥಳವನ್ನು ತೋರಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿತನನ್ನು ಮಂಗೊಡ್ಲ ಕ್ರಾಸ್ ಹತ್ತಿರ ದಸ್ತಗಿರಿ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಜವಾದ ಆರೋಪಿತನನ್ನು ರಕ್ಷಿಸುವ ಉದ್ದೇಶದಿಂದ ಈ ಆರೋಪಿತರ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳು ಸಲ್ಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ